


## ಪುಟ್ಟ ದೇಶದ ದೊಡ್ಡ ಸಾಹಸ

**19**

‘ಫಿಫಾ ವಿಶ್ವಕಪ್ ಫುಟ್ಬಾಲ್ 2022’ ಕ್ರೀಡಾಕೂಟ ವಿಶ್ವದ ಗಮನಸೆಳೆದ ಮಹತ್ವದ ವಿದ್ಯಮಾನ. ಈ ಮಹಾನ್ ಕೂಟವನ್ನು ಆಯೋಜಿಸಿದ ಪುಟ್ಟ ದೇಶ ಕತಾರ್, ತನ್ನ ಕರ್ತೃತ್ವ ಶಕ್ತಿಯಿಂದ ವಿಶ್ವವನ್ನು ನಿಬ್ಬೆರಗಾಗಿಸಿದೆ. 32 ತಂಡಗಳು ಭಾಗವಹಿಸಿದ ಕ್ರೀಡಾಕೂಟದ ಸಿದ್ಧತೆಗೆ ಕತಾರ್ 300 ಬಿಲಿಯನ್ ಡಾಲರ್‌ಗಳನ್ನು ವಿನಿಯೋಗಿಸಿದೆ. ವಿಶ್ವಕಪ್ ಪಂದ್ಯಾವಳಿಗೆಂದೇ ವಿಶ್ವದರ್ಜೆಯ 6 ಆಟದ ಅಂಗಳಗಳನ್ನು ನಿರ್ಮಿಸಿ, ಎರಡು ಕ್ರೀಡಾಂಗಣಗಳನ್ನು ನವೀಕರಿಸಿದೆ. ಮರುಭೂಮಿಯ ಹವೆ ಅತಿಥಿಗಳನ್ನು ಕಂಗೆಡಿಸದಂತೆ ದೇಶದ ಮೂಲಭೂತ ಸೌಕರ್ಯಗಳನ್ನು ಉತ್ತಮಗೊಳಿಸಿದೆ. ವಿಶ್ವಕಪ್ ಫುಟ್‌ಬಾಲ್ ಪಂದ್ಯಾವಳಿ ಅತ್ಯಂತ ಯಶಸ್ವಿಯಾಗಿ ನಡೆಸುವ ಮೂಲಕ ವಿಶ್ವಕ್ಕೆ ತನ್ನ ಆರ್ಥಿಕ ಹಾಗೂ ಕರ್ತೃತ್ವ ಶಕ್ತಿಯ ಸಾಮರ್ಥ್ಯವನ್ನು ಕತಾರ್ ತೋರಿಸಿದೆ.



## ಆರ್ಥಿಕ ಹಿಂಜರಿತದ ಕರಾಳ ನರ್ತನ

**20**

ರಷ್ಯಾ–ಉಕ್ರೇನ್ ಯುದ್ಧ, ಜ್ವರದಂತೆ ಏರುತ್ತಿರುವ ಕಚ್ಚಾ ತೈಲದ ದರ, ಮತ್ತಿತರ ಜಾಗತಿಕ ಪ್ರಭಾವಗಳಿಂದಾಗಿ ಭಾರತವೂ ಸೇರಿದಂತೆ ಜಗತ್ತು ಆರ್ಥಿಕ ಒತ್ತಡಕ್ಕೆ ಸಿಲುಕಿದೆ. ಜಿಡಿಪಿ ಬೆಳವಣಿಗೆಯ ಅಂದಾಜನ್ನು ಕಡಿತಗೊಳಿಸಲಾಗಿದೆ. ಕೋವಿಡ್ ಬಿಕ್ಕಟ್ಟಿನಿಂದ ಜಗತ್ತು ಪಾರಾಯಿತು ಎನ್ನುವಾಗಲೇ ಆರ್ಥಿಕ ಹಿಂಜರಿತದ ಭೀತಿ ಎದುರಾಗಿದೆ. ಅಮೆರಿಕದಂಥ ದೇಶದಲ್ಲಿ ಈಗಾಗಲೇ ಆರ್ಥಿಕ ಹಿಂಜರಿತದ ಛಾಯೆಗಳು ಗೋಚರಿಸಿವೆ.

2023 ಜಾಗತಿಕ ಆರ್ಥಿಕ ಹಿಂಜರಿತದ ವರ್ಷವಾಗಲಿದೆ ಎಂದು ಬಹುತೇಕ ವಿತ್ತತಜ್ಞರು ಈಗಾಗಲೇ ಅಂದಾಜು ಮಾಡಿದ್ದಾರೆ. ಈ ಭೀತಿಯಿಂದಲೇ ಗೂಗಲ್, ಅಮೆಜಾನ್, ಟ್ವಿಟರ್, ಫೇಸ್‌ಬುಕ್ ಒಡೆತನದ ಮೆಟಾ ಸೇರಿದಂತೆ ಬಹುತೇಕ ಜಾಗತಿಕ ಕಂಪನಿಗಳು ನೇಮಕಾತಿಯನ್ನು ನಿಧಾನಗೊಳಿಸಿವೆ. ಇದರೊಟ್ಟಿಗೆ ತನ್ನ ಉದ್ಯೋಗಿಗಳಲ್ಲಿ ಶೇ. 5ರಿಂದ 10ರಷ್ಟು ಮಂದಿಯನ್ನು ವಜಾ ಮಾಡುತ್ತಿವೆ. ಸಾವಿರಾರು ಉದ್ಯೋಗಿಗಳು 2022ರಲ್ಲಿ ಕೆಲಸ ಕಳೆದುಕೊಂಡಿದ್ದಾರೆ. ಹಣದುಬ್ಬರ ಅನ್ನುವುದು ಅಮೆರಿಕ, ಬ್ರಿಟನ್, ಭಾರತ ಸೇರಿದಂತೆ ಜಗತ್ತಿನ ಬಹುತೇಕ ದೇಶಗಳನ್ನು ಕಾಡುತ್ತಿದೆ. ಹಣದುಬ್ಬರ ನಿಯಂತ್ರಣಕ್ಕೆ ವಿವಿಧ ದೇಶಗಳ ಕೇಂದ್ರೀಯ ಬ್ಯಾಂಕ್‌ಗಳು ಬಡ್ಡಿ ದರವನ್ನು ಒಂದೇ ಸಮನೆ ಏರಿಸುತ್ತಿದ್ದು, ಆರ್ಥಿಕ ಚಟುವಟಿಕೆಗಳಿಗೆ ತಡೆಯೊಡ್ಡಿದೆ. ಭಾರತದಲ್ಲಿ ರಿಸರ್ವ್ ಬ್ಯಾಂಕ್ ಕಳೆದ ಮೇನಿಂದ ಡಿಸೆಂಬರ್ ಅವಧಿಯಲ್ಲಿ ಎಂಟು ಸಲ ರೆಪೊ ದರವನ್ನು ಏರಿಕೆ ಮಾಡಿದೆ. ಒಟ್ಟು ಶೇ. 2.25 ಹೆಚ್ಚಳವಾಗಿ ಶೇ.6.25ಕ್ಕೆ ರೆಪೊ ದರ ಮುಟ್ಟಿದೆ. ಈ ಪರಿಣಾಮ ಗೃಹ, ವಾಹನ ಮತ್ತಿತರ ಸಾಲಗಳ ಬಡ್ಡಿ ದರಗಳು ಏರಿಕೆಯಾಗಿವೆ.




ಕರ್ನಾಟಕದ ಮೊಳಕಾಲ್ಮೂರು ತಾಲ್ಲೂಕಿನ ರಾಂಪುರದಲ್ಲಿ ಕಂಡುಬಂದ ‘ಭಾರತ್ ಜೋಡೊ’ ರಂಗು